ವಾರದ ಪತ್ರ

## ಪ್ಲಾನುಗಳಿಗೆ ಕೊನೆ ಇಲ್ಲವೇ?

ನಿಜವಾಗಿಯೂ 'ಅಗ್ನಿಸಾಕ್ಷಿ' ವೀಕ್ಷಕ ಗೊಂದಲದಲ್ಲಿ ಬಿದ್ದಿದ್ದಾನೆಂದರೆ ತಪ್ಪಿಲ್ಲ. ಲಂಗು ಲಗಾಮಿಲ್ಲದ ಕಥೆ ಸಂಬಂಧವಿಲ್ಲದ ಸನ್ನಿವೇಶಗಳು ನೋಡಲು ಹಿಂಸೆ ಆಗುತ್ತಿದೆ. ಜೈಲಿನಲ್ಲಿರುವ ಚಂದ್ರಿಕಾಳ ಅಟ್ಟಹಾಸ, ಮನೆಯಲ್ಲಿರುವ ತನುವಿನ ಹುಚ್ಚುತನ ಒಂದಕ್ಕೊಂದು ಬೆಸೆದು ಹೆಚ್ಚಾಗುವ ಸನ್ನಿವೇಶಗಳ ವೀಕ್ಷಕವಿವರಣೆ ಸಹಿಸಲು ಅಸಾಧ್ಯ. ಇದು ಸದ್ಯಕ್ಕೆ ಮುಗಿಯದೆ ಇನ್ನು ಐದಾರು ವರ್ಷ ಮುಂದುವರಿಯುವುದು ಖಂಡಿತ ಅನ್ನಿಸುತ್ತದೆ. 'ಹಾಳೂರಿಗೆ ಉಳಿದವನೆ ಗೌಡ' ಅನ್ನುವಂತೆ ಕನ್ನಡ ಧಾರಾವಾಹಿಗಳ ಸಾಲಿನಲ್ಲಿ ಇದಿದೆ. ನೋಡಿದ್ದೇ ನೋಡಿ ಹುಚ್ಚು ಹಿಡಿಯುವಂತಾಗಿದೆ. ಈಗಿರುವ ಎಲ್ಲರೂ ಪ್ರತಿಯೊಂದು ವಾಹಿನಿಯನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ವೀಕ್ಷಕರನ್ನು ಬುಗರಿಯಂತೆ ಆಡಿಸುತ್ತಿದ್ದಾರೆ.

—ಎನ್.ಎಸ್.ಚಂದ್ರಶೇಖರ್ ಬೆಂಗಳೂರು

## ಅಂತೂ ಧಾರಾಕಾರ ಹರಿಯಿತು

ಚಂದನ ಟೀವಿಯಲ್ಲಿ ಪ್ರಸಾರವಾಗುವ 'ಕರುಳಿನ ಕೂಗು' ಅತೀ ಹೃದಯಸ್ಪರ್ಶಿ ಆಗಿತ್ತೇನೋ ಅನ್ನಿಸುತ್ತೆ. ಅಶ್ರುಗಳು ನನಗರಿಯದಂತೆ ಹರಿಯಿತು. ಪ್ರತಿ ಪಾತ್ರಧಾರಿಗಳ ಶಿಖರವಿಟ್ಟಂತಹ ಅಭಿನಯ ಉತ್ತಮವಾಗಿತ್ತು. ಜಾಹೀರಾತನ್ನು ಸ್ವಲ್ಪ ಕಡಿಮೆ ಮಾಡಿ. ಕಾರ್ಯಕ್ರಮಕ್ಕೆ ಹೆಚ್ಚಿನ ಸಮಯ ನೀಡಿದ್ದರೆ ಇನ್ನೂ ಚೆನ್ನಾಗಿ ಇರುತ್ತಿತ್ತು.

—ಶ್ರೀನಿವಾಸ ಪದಕಿ, ಮುಂಬೈ

## ಬದುಕಿನ ಪಾಠ

'ಝೀ' ಕನ್ನಡದ ಮೇ12ರ 'ವೀಕ್ ಎಂಡ್ ವಿತ್ ರಮೇಶ್'ನ ಅತಿಥಿಯಾದ ವಿನಯಾ ಪ್ರಸಾದ್ ಸಹೋದರ ಒಂದು ಪ್ರಸಂಗವನ್ನು ಹಂಚಿಕೊಳ್ಳುವಾಗ 'ಆಗೆಲ್ಲಾ ಈಗಿನಂತೆ ಮುಖಕ್ಕೆ, ತಲೆಗೆ ದೇಹಕ್ಕೆ ಎಂದು ಬೇರೆ ಬೇರೆ ಸೋಪು ಇರಲಿಲ್ಲ' ಎಂದಾಗ ರಮೇಶ್ ಹೌದು ಹೌದು ಎಂದು ಅನುಮೋದಿಸಿದರು. ಈ ಮಾತಿಗೆ ನಮ್ಮ ಮನೆ ಮಂದಿಯೆಲ್ಲಾ ಖುಷಿಯಿಂದ ತಲೆ ಆಡಿಸಿದರು. ಹೌದು ಆಗ ಈಗಿನಂತೆ ಬಗೆ ಬಗೆ ಇರಲಿಲ್ಲ. ಕಾಲ ಬದಲಾದಂತೆ ಎಲ್ಲವೂ ಬಗೆ–ಬಗೆ, ವಿಧ–ವಿಧ ರೀತಿಯ ಆಲೋಚನೆಯಲ್ಲಿ ಪಲ್ಲಟವಾಗಿದೆ. ಆದರೂ ನಮ್ಮಲ್ಲಿ ಆಗಿನವರಂತೆ ಗಟ್ಟಿಯಾದ ಮನಸ್ಸು, ಕಷ್ಟಗಳನ್ನು ಎದುರಿಸುವ ಮನೋಭಾವ ಇಲ್ಲ. ಇದನ್ನು ಈ ಕಾರ್ಯಕ್ರಮದ ಪ್ರತಿ ಸಂಚಿಕೆಯೂ ಹೇಳುತ್ತಿದೆ.

—ರೇಷ್ಮಾ ಜಿ.ಎಂ. ಕೊಟ್ಟೂರು

## ತರ್ಕವಿಲ್ಲದ ವಯಸ್ಸು

'ಅಗ್ನಿಸಾಕ್ಷಿ' ಪಾತ್ರಧಾರಿಗಳ ವಯಸ್ಸು ಕೇಳಿದರೆ ತಲೆ ತಿರುಗಿ ಹೋಗುತ್ತದೆ. ಧಾರಾವಾಹಿ ಪ್ರಕಾರ ವಿಲನ್ ಚಂದ್ರಿಕಾಳ ವಯಸ್ಸು 28. ಚಂದ್ರಿಕಾ–ಗೌತಮ್ ಮದುವೆಯಾಗಿ ಹತ್ತು ವರ್ಷ ಆಗಿದೆ, ಅಲ್ಲಿಗೆ ಮದುವೆಯಾದಾಗ ಚಂದ್ರಿಕಾಗೆ 18 ವರ್ಷ.

ಸನ್ನಿಧಿ–ಸಿದ್ಧಾರ್ಥ ಮದುವೆಯಾಗಿ ಐದು ವರ್ಷ ಆಗಿದೆ. ಸಿದ್ಧಾರ್ಥ ಡಿಗ್ರಿ ಮುಗಿಸಿ 2–3 ವರ್ಷ ಮನೆ ಬಿಟ್ಟು ಹೋಗಿರುತ್ತಾನೆ. ಚಂದ್ರಿಕಾ ಅವನನ್ನು ಪತ್ತೆ ಹಚ್ಚಿ ತಂದು ಮದುವೆ ಮಾಡುತ್ತಾಳೆ. ಅವನ ವಯಸ್ಸು ಹೇಗೇ ಲೆಕ್ಕ ಹಾಕಿದರೂ 28 ದಾಟುತ್ತದೆ. ಅಲ್ಲಿಗೆ ಇಬ್ಬರಿಗೂ ಸಮ ವಯಸ್ಸು.

ಚಂದ್ರಿಕಾ ಪದೇ ಪದೇ ನಾನು ನಿಮ್ಮನ್ನೆಲ್ಲ ತುತ್ತು ಕೊಟ್ಟು ಸಾಕಿ ಬೆಳೆಸಿದೆ ಎನ್ನುತ್ತಾಳೆ. 18 ವರ್ಷದ ಹುಡುಗಿ, 18 ವರ್ಷದ ಹುಡುಗನನ್ನು ತುತ್ತು ತಿನ್ನಿಸಿ ಸಾಕುತ್ತಾಳೆ.

ಇನ್ನು ಅಂಜಲಿ–ಅಖಿಲ್ ಹಾಸ್ಟೆಲ್‌ನಲ್ಲಿದ್ದು ಹೈಸ್ಕೂಲ್ ಓದಿದೆವು ಎನ್ನುತ್ತಾರೆ. ಒಂಬತ್ತನೇ ಕ್ಲಾಸಿಗೆ ಮನೆಗೆ ಬರುವ ಅಂಜಲಿ ವಯಸ್ಸು 14 ಎಂದು ಲೆಕ್ಕ ಹಾಕಿದರೂ, ಚಂದ್ರಿಕಾ ಮದುವೆ 10 ವರ್ಷ ಸೇರಿಸಿದರೆ 24 ವರ್ಷ ಆಗುತ್ತದೆ. ಆದರೆ ಅಂಜಲಿ ಧಾರಾವಾಹಿ ಶುರುವಾದಾಗಿನಿಂದಲೂ 'ಮೊದಲ ವರ್ಷದ ಡಿಗ್ರಿ'ಯನ್ನು ಓದುತ್ತಿದ್ದಾಳೆ.

—ಇಂದು, ತಿಪಟೂರು

## ಅತಿಯಾದ ಆದರ್ಶ

'ಮಗಳು ಜಾನಕಿ'ಯಲ್ಲಿ ಖಡಕ್ ಪೊಲೀಸ್ ಅಧಿಕಾರಿ ಜಾನಕಿ ಭಾರ್ಗಿ, ತನ್ನ ನಿಷ್ಠೂರತನ ಸಮರ್ಥಿಸಿಕೊಳ್ಳುತ್ತಾ, ತನಗೆ ಸರ್ಕಾರ ಕೊಟ್ಟಿರುವ ವಾಹನವನ್ನು ಸ್ವಂತ ಕೆಲಸಕ್ಕೆ ಎಂದೂ ಉಪಯೋಗಿಸುವುದಿಲ್ಲ. ನಿರಂಜನ್ ಚಾಲಕನ ಬಲವಂತಕ್ಕೆ ಉಪಯೋಗಿಸಿದ ಸಂದರ್ಭದಲ್ಲಿ, ಜಾನಕಿಯ ಖಡಕ್ ಮಾತು, ಮುಕುಟಪ್ರಾಯವಾಗಿರಬಹುದು. ಆ ಆದರ್ಶಗಳೆಲ್ಲಾ ಇಂದು ಕಥೆ, ಕಾದಂಬರಿ ಹಾಗೂ ಧಾರಾವಾಹಿಗಳಿಗೆ ಸೀಮಿತವಾಗಿವೆ. ಇಂತಹ ಪ್ರಾಮಾಣಿಕ ಅಧಿಕಾರಿಗಳು ಪ್ರಾಯಶಃ ಬೆರಳೆಣಿಕೆಯಷ್ಟು ಇರಬಹುದು. ಕಥಾ ವಸ್ತು ಸಮಾಜದ ಇಂದಿನ ಓರೆಕೋರೆಗಳನ್ನು ಬಿಂಬಿಸಬೇಕಾದದ್ದು ಸಮ್ಮತವಲ್ಲವೇ?

—ಸುಂದರ್, ಬೆಂಗಳೂರು

## ಬೆರಗಿನ ಬದಲು

ಕಲರ್ಸ್ ಕನ್ನಡದ 'ರಾಧಾರಮಣ'ದಲ್ಲಿ ನಾಯಕಿಯೇ ಬದಲಾಗಿದ್ದಾರೆ. ಈತನಕ ತನ್ನ ಸ್ಥಿತಪ್ರಜ್ಞ ಅಭಿನಯದಿಂದ ಇಡೀ ಧಾರಾವಾಹಿಯನ್ನು ನಿಭಾಯಿಸುತ್ತಿದ್ದ ಶ್ವೇತಾ ಪ್ರಸಾದ್ ಜಾಗಕ್ಕೆ ಈಗ 'ಗಾಂಧಾರಿ'ಯ ಕಾವ್ಯಾ ಗೌಡ ರಾಧಾರ ಪೋಷಾಕು ಧರಿಸಿದ್ದಾರೆ. ಮೇಲುನೋಟಕ್ಕೆ ನಾಯಕಿ ಬದಲಾಯಿತು ಎಂದೆನಿಸಿದರೂ ಕಾವ್ಯಾ ಹಾಗೂ ಶ್ವೇತಾ ಅವಳಿ ಎಂದು ಸಂದೇಹಪಡುವಷ್ಟು ಈ ಪಾತ್ರಕ್ಕೆ ಮತ್ತೋರ್ವ ಕಲಾವಿದೆ ಸಿಕ್ಕಿದ್ದಾರೆ. 'ಅಗ್ನಿಸಾಕ್ಷಿ' ಚಂದ್ರಿಕಾ ಪಾತ್ರಕ್ಕೆ ಎರಡನೇ ಕಲಾವಿದೆ ನ್ಯಾಯ ಒದಗಿಸಿದಂತೆಯೇ ಈಗ ರಾಧಾ ಪಾತ್ರಕ್ಕೆ ಕಾವ್ಯ ನ್ಯಾಯ ಒದಗಿಸುತ್ತಿದ್ದಾರೆ.

—ಎಸ್. ಲಕ್ಷ್ಮೀ ನರಸಿಂಹ, ಚಾಮರಾಜನಗರ

## 'ರಮೇಶರೊಂದಿಗೆ ವಾರಾಂತ್ಯ' ಎನ್ನಬಾರದೆ?

ವೀಕ್ ಎಂಡ್ ವಿತ್ ರಮೇಶ್' ಕಾರ್ಯಕ್ರಮದಲ್ಲಿ ಸಿನಿಮಾ ತಾರೆಯರ ಮಕ್ಕಳು ಶೇ. 90 ಇಂಗ್ಲಿಷ್‌ನಲ್ಲಿ ಮತ್ತು ಶೇ.10 ಕನ್ನಡದಲ್ಲಿ ಮಾತನಾಡುವಾಗ ಇದು ಕನ್ನಡ ಕಾರ್ಯಕ್ರಮವೋ ಎನ್ನುವ ಸಂದೇಹ ಬರುತ್ತದೆ. ಕನ್ನಡ ಕಾರ್ಯಕ್ರಮಗಳ ವೀಕ್ಷಕರು ಹೆಚ್ಚಾಗಿ ಇರುವುದು ಇಂಗ್ಲಿಷ್ ಭಾಷೆ ತಿಳಿಯದ ಹಳ್ಳಿಗಳಲ್ಲಿ ಮತ್ತು ಸಣ್ಣ ಪಟ್ಟಣಗಳಲ್ಲಿ. ಈ ಮುಗ್ಧ ಕನ್ನಡಿಗರ ಗಂಟಲಿನಲ್ಲಿ ಇಂಗ್ಲಿಷ್ ಕಡುಬನ್ನು ತುರುಕುವುದೇಕೆ? ಟೀವಿಯವರು ಈ ನಿಟ್ಟಿನಲ್ಲಿ ದಪ್ಪ ಚರ್ಮದವರು ಎನ್ನುವುದು ತಿಳಿದ ವಿಷಯ. ಈ ಕಾರ್ಯಕ್ರಮದ ಹೆಸರನ್ನು ಕನ್ನಡದಲ್ಲಿ 'ರಮೇಶರೊಂದಿಗೆ ವಾರಾಂತ್ಯ' ಎಂದು ಇಡಬಹುದಿತ್ತು.

— ರಮಾನಂದ ಶರ್ಮಾ, ನವದೆಹಲಿ

## ನೀರಸ ಧಾರಾವಾಹಿಗಳು

ಇಂದು ಖಾಸಗಿವಾಹಿನಿಗಳಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿಗಳನ್ನು ನೋಡಿದಾಗ ವ್ಯಥೆಯಾಗುತ್ತದೆ. ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಬದಲು ಸಂಸಾರ ಒಡೆಯುವ, ಸಂಬಂಧಗಳನ್ನು ಹಗುರ ಮಸೂರದಿಂದ ನೋಡಿ ಗೇಲಿ ಮಾಡುವ ಕಾರ್ಯಕ್ರಮಗಳು ಏರುಗತಿಯಲ್ಲಿವೆ.

ಬಡ ಮತ್ತು ಮಧ್ಯಮ ವರ್ಗದವರ ಬದುಕಿನ ಬಗ್ಗೆ ಇವರಿಗೆ ಎಳ್ಳಷ್ಟು ಕಾಳಜಿ ಇಲ್ಲ. ಶ್ರೀಮಂತಿಕೆ, ಅನೈತಿಕ ಸಂಬಂಧಗಳ ವೈಭವೀಕರಣದಿಂದ ಕೆಟ್ಟ ಸಂದೇಶ ಹೋಗುವ ಅಪಾಯದ ಅರಿವು ಸಹ ಇವರಿಗಿಲ್ಲದಿರುವುದು ಕಳವಳಕಾರಿ. ಕೆಲವು ದೃಶ್ಯಗಳಂತೂ ಸಂಸಾರ ಸಮೇತ ನೋಡಲು ಅನರ್ಹ. ಸಿನಿಮಾಕ್ಕೆ ಸೆನ್ಸಾರ್ ಮಂಡಳಿ ಎಂಬ ನಿಯಂತ್ರಣವಿದೆ. ಆದರೆ, ಈ ಧಾರಾವಾಹಿಗಳಿಗೆ ಅಂತಹ ಯಾವ ನಿಯಂತ್ರಣ ಇರದಿರುವುದು ಒಂದು ಕೊರತೆಯೇ ಸೈ.

—ವೆಂಕಟೇಶ ಮುದಗಲ್ ಕಲಬುರಗಿ